OS 112/2020
PW1

ದಿನಾಂಕ **22.03.2021** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು** ಃ ಶ್ರೀ ಹೆಚ್ ಎಸ್ ಎಂ ವಕೀಲರಿಂದ ಃ

ನಾನು ಮೂಡಬಿದ್ರೆ ತಾಲೂಕಿನ ನಿಡ್ಡೋಡಿ ಗ್ರಾಮದಲ್ಲಿ ವಾಸವಾಗಿರುತ್ತೇನೆ. ದಾವಾ ಆಸ್ತಿಗಳು ಕಾರ್ಕಳ ತಾಲೂಕಿನ ಮುಲ್ಲಡ್ಕ ಗ್ರಾಮದಲ್ಲಿವೆ. ನಿಡ್ಡೋಡಿಯಿಂದ ಮುಲ್ಲಡ್ಕಗ್ರಾಮಕ್ಕೆ **7** ಮೈಲಿ ಅಂತರವಿದೆ. **1** ಮತ್ತು **2** ನೇ ಪ್ರತಿವಾದಿಗಳು ದಾವಾ ಆಸ್ತಿಯ ಮನೆಯಲ್ಲಿ ವಾಸವಾಗಿರುತ್ತಾರೆ. ದಾವಾ ಆಸ್ತಿಯನ್ನು **1** ಮತ್ತು **2** ನೇ ಪ್ರತಿವಾದಿಗಳು ಸಾಗುವಳಿ ಮಾಡುತ್ತಿದ್ದಾರೆ ಎಂದರೆ ಸಾಕ್ಷಿಯು ನನ್ನ ಆಸ್ತಿಯನ್ನು ನಾನು ಸಾಗುವಳಿ ಮಾಡುತ್ತಿದ್ದೇನೆ ಎಂದು ನುಡಿಯುತ್ತಾರೆ. ನಾನು ನನ್ನ ಆಸ್ತಿ ಎಂದು ಸಾಧನೆ ಮಾಡುತ್ತಿರುವ ಆಸ್ತಿಗಳು ನನ್ನ ತಂದೆಗೆ ಸೇರಿದ ಆಸ್ತಿಗಳಾಗಿರುತ್ತವೆ. ಸದ್ರಿ ಆಸ್ತಿಗಳನ್ನು ನನ್ನ ತಂದೆ ನನ್ನ ಹೆಸರಿಗೆ ವಿಲೂನಾಮೆ ಬರೆದಿರುತ್ತಾರೆ. ನನ್ನ ತಂದೆಯವರು ನನಗೆ ಮತ್ತು **1** ರಿಂದ **4** ನೇ ಪ್ರತಿವಾದಿಗಳಿಗೆ ವಿಲೂನಾಮೆ ಮಾಡಿರುತ್ತಾರೆ. ವಿಲೂನಾಮೆಯಡಿಯಲ್ಲಿ ನನ್ನ ತಂದೆಯು ನನಗೆ ನೀಡಿದ ಆಸ್ತಿಯ ಪಹಣಿ ಪತ್ರಿಕೆಗಳು ನನ್ನ ಹೆಸರಿನಲ್ಲಿರುತ್ತವೆ. ನನ್ನ ಹೆಸರಿನಲ್ಲಿರುವ ಪಹಣಿಪತ್ರಿಕೆಗಳು ನನ್ನ ಬಳಿ ಇವೆ. ವಿಲೂನಾಮೆ ಪ್ರಕಾರ ನನ್ನ ಹೆಸರಿಗೆ ಪಹಣಿಪತ್ರಿಕೆಗಳು ಆಗಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಬಿ ಅನುಸೂಚಿ ಆಸ್ತಿಗಳು ನನ್ನ ಸ್ವಾಧೀನದಲ್ಲಿವೆ. ಸದ್ರಿ ದಾವಾ ಬಿ ಅನುಸೂಚಿ ಆಸ್ತಿಗಳು **2** ವರ್ಷಗಳ ಹಿಂದೆ ನನ್ನ ಸ್ವಾಧೀನಕ್ಕೆ ಬಂದಿರುತ್ತವೆ. ಸದ್ರಿ ಸ್ವಾಧೀನವನ್ನು **1** ನೇ ಪ್ರತಿವಾದಿ ನೀಡಿರುತ್ತಾರೆ. ನಿಮ್ಮ ಸ್ವಾಧೀನದಲ್ಲಿವೆ ಎಂದು ಹೇಳುವ ಆಸ್ತಿಗಳ ಸರ್ವೆ ಮತ್ತು ಗಡಿಗುರುತುಗಳನ್ನು ಮಾಡಿಸಿದ್ದೀರಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ಇನ್ನು ಮಾಡಿಸಬೇಕಾಗಿದೆ ಎಂದು ನುಡಿಯುತ್ತಾರೆ. **1** ನೇ ಪ್ರತಿವಾದಿಯು ನನಗೆ ಸ್ವಾಧೀನ ನೀಡಿದ್ದಾರೆ ಎಂದು ಹೇಳುವ ಸಮಯದಲ್ಲಿ ಆಸ್ತಿಗಳನ್ನು ಅಳತೆ ಮಾಡಿ ಗಡಿಗುರುತು ಗುರುತಿಸಿರುವುದಿಲ್ಲ. ವಿಲೂನಾಮೆ ಮೂಲಕ ನನ್ನ ಹಕ್ಕಿಗೆ ಬಂದಿದೆ ಎಂದು ಹೇಳುವ ಆಸ್ತಿಗಳ ಸರ್ವೆ ನಕ್ಷೆಗಳು ನನ್ನ ಬಳಿ ಇವೆ. ಸದ್ರಿ ಸರ್ವೆ ನಕ್ಷೆಗಳನ್ನು ಯಾವಾಗ ಮಾಡಿಸಲಾಗಿತ್ತು ಎಂದು ನನಗೆ ನೆನಪಿಲ್ಲ. ನನ್ನ ಸ್ವಾಧೀನದಲ್ಲಿವೆ ಎಂದು ಹೇಳುವ ಆಸ್ತಿಗಳ ಗಡಿಗುರುತುಗಳು ತಿಳಿದಿವೆ

ಮತ್ತು ಅದನ್ನು ಪ್ರಸ್ತುತ ನನಗೆ ಹೇಳಲು ಬರುವುದಿಲ್ಲ. ದಾವಾ ಬಿ ಅನುಸೂಚಿ ಆಸ್ತಿಗಳ ಸರ್ವೆ ನಕ್ಷೆ ಇರುವುದಿಲ ಎಂದರೆ ಸರಿಯಲ್ಲ. ದಾವಾ ಬಿ ಅನುಸೂಚಿ ಆಸ್ತಿಗಳು ನನ್ನ ಪ್ರತ್ಯೇಕ ಸ್ವಾಧೀನದಲ್ಲಿ ಇಲ್ಲ ಎಂದರೆ ಸರಿಯಲ್ಲ.

**2.** **1** ರಿಂದ **4** ನೇ ಪ್ರತಿವಾದಿಗಳು ನನಗೆ ಯಾವುದೇ ರೀತಿಯಲ್ಲಿ ತೊಂದರೆ ಮಾಡಿರುವುದಿಲ್ಲ. **5** ನೇ ಪ್ರತಿವಾದಿಯು **1** ನೇ ಪ್ರತಿವಾದಿಯೊಂದಿಗೆ ದಾವಾ ಎ ಅನುಸೂಚಿ ಆಸ್ತಿಯಲ್ಲಿನ ಮನೆಯಲ್ಲಿ ವಾಸವಾಗಿದ್ದಾರೆ ಎಂದರೆ ಸರಿ. **1** ನೇ ಪ್ರತಿವಾದಿಗೆ ಕಣ್ಣು ಕಾಣಿಸುವುದಿಲ್ಲ. ಆ ರೀತಿ **1** ನೇ ಪ್ರತಿವಾದಿಗೆ **10** ನೇ ಪ್ರಾಯದಲ್ಲಿ ಕಣ್ಣಿನ ಸಮಸ್ಯೆ ಕಾಣಿಸಿಕೊಂಡಿರುತ್ತದೆ. **1** ನೇ ಪ್ರತಿವಾದಿಗೆ ಕಣ್ಣು ಕಾಣಿಸಿದ ಮೇರೆಗೆ ನ್ಯಾಯಾಲಯಕ್ಕೆ ಮತ್ತು ಇತರ ಕಚೇರಿಗಳಿಗೆ ಹೋಗಿ ವ್ಯವಹರಣೆ ಮಾಡುವಷ್ಟು ಸಾಮರ್ಥ್ಯ ಇರುವುದಿಲ್ಲ. **1** ನೇ ಪ್ರತಿವಾದಿಗೆ **4** ಜನ ಹೆಣ್ಣು ಮಕ್ಕಳು ಮತ್ತು ಇಬ್ಬರು ಗಂಡು ಮಕ್ಕಳು. ಸದ್ರಿ **4** ಜನ ಹೆಣ್ಣು ಮಕ್ಕಳು ಮದುವೆಯಾಗಿ ತಮ್ಮ ಗಂಡಂದಿರ ಮನೆಯಲ್ಲಿ ಬೇರೆ ಬೇರೆ ಕಡೆಗಳಲ್ಲಿ ವಾಸವಾಗಿರುತ್ತಾರೆ. ಇಬ್ಬರು ಗಂಡು ಮಕ್ಕಳು **1** ನೇ ಪ್ರತಿವಾದಿಯೊಂದಿಗೆ ವಾಸವಾಗಿರುತ್ತಾರೆ. ದಾವಾ ಎ ಅನುಸೂಚಿ ಆಸ್ತಿಯಲ್ಲಿ **1** ನೇ ಪ್ರತಿವಾದಿಯ ಇಬ್ಬರು ಗಂಡು ಮಕ್ಕಳು ತೆಂಗು ಮತ್ತು ಅಡಿಕೆ ಅಭಿವೃದ್ದಿಗಳನ್ನು ಮಾಡಿರುತ್ತಾರೆ. **5** ನೇ ಪ್ರತಿವಾದಿಯು **5** ವರ್ಷಗಳ ಹಿಂದೆ ದಾವಾ ಎ ಅನುಸೂಚಿ ಆಸ್ತಿಯಲ್ಲಿ ಬೋರ್ ವೆಲ್ ನ್ನು ಕೊರೆಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

**3.** ನಾನು ನನ್ನ ವಾದ ಪತ್ರ ಮತ್ತು ಮುಖ್ಯ ವಿಚಾರಣೆಯಲ್ಲಿ ಕಾಣಿಸಿರುವಂತೆ **5** ನೇ ಪ್ರತಿವಾದಿಯು ದಾವಾ ಆಸ್ತಿಗಳನ್ನು ಬೇರೆಯವರಿಗೆ ಮಾರಾಟ ಮಾಡಲು ಪ್ರಯತ್ನಿಸಿದ್ದಾರೆ ಎಂದು ಹೇಳುವ ಬೇರೆಯವರ ಹೆಸರುಗಳು ನನಗೆ ಗೊತ್ತಿಲ್ಲ. ಅದೇ ರೀತಿ **5** ನೇ ಪ್ರತಿವಾದಿಯು ದಾವಾ ಎ ಅನುಸೂಚಿ ಆಸ್ತಿಯನ್ನು ಅಡಮಾನವಿರಿಸಿ ಸಾಲ ಮಾಡಿದ್ದಾರೆ ಎನ್ನುವ ವಿಚಾರವನ್ನು ಯಾವ ಆಧಾರದ ಮೇರೆಗೆ ಕಾಣಿಸಿರುತ್ತೇನೆ ಎಂದು ನನಗೆ ಗೊತ್ತಿಲ್ಲ. **5** ನೇ ಪ್ರತಿವಾದಿಯು **2020** ರ ಏಪ್ರೀಲ್ ಮಾಹೆಯಲ್ಲಿ ಮದುವೆಯಾದ ವಿಚಾರ ನನಗೆ ಗೊತ್ತಿಲ್ಲ. ನಾನು ವಾದಪತ್ರದ ಕಂಡಿಕೆ **10** ರಲ್ಲಿಕಾಣಿಸಿರುವ ವಿಚಾರಗಳು ಯಾವ ಆಧಾರದ ಮೇರೆಗೆ ಕಾಣಿಸಿರುತ್ತೀರಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ಮನೆಯ ಬಳಿ ಹೋದಾಗ ಮನೆಯೊಳಗೆ ಒಬ್ಬಳು ಹೆಂಗಸು ಇರುತ್ತಾರೆ ಮತ್ತು **5** ನೇ

ಪ್ರತಿವಾದಿಯು ಅವರನ್ನು ನನಗೆ ಪರಿಚಯಿಸಿರುವುದಿಲ್ಲ ಮತ್ತು ನನ್ನಿಂದ ಆಶಿರ್ವಾದ ಪಡೆದುಕೊಂಡಿರುವುದಿಲ್ಲ. ಸದ್ರಿ ಮಹಿಳೆ ಯಾರು ಎಂದು ತಿಳಿದುಕೊಳ್ಳಲು ಪ್ರಯತ್ನಿಸಿರುವುದಿಲ್ಲ. 5 ನೇ ಪ್ರತಿವಾದಿಯು ಬೇರೆ ಜಾತಿಯ ಹೆಣ್ಣು ಮಗಳನ್ನು ಮದುವೆಯಾದ್ದಾನೆ ಎನ್ನುವ ಕಾರಣದಿಂದ ನಾನು ಮತ್ತು ನನ್ನ ಮಕ್ಕಳು ಆತನ ವಿರುದ್ದ ದ್ವೇಷ ಸಾಧನೆ ಮಾಡುತ್ತಿದ್ದೇವೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ನನಗೆ ಮದುವೆಯಾದ ವಿಚಾರ ತಿಳಿದಿರುವುದಿಲ್ಲ ಎಂದು ನುಡಿಯುತ್ತಾರೆ. ನನಗೆ 5 ನೇ ಪ್ರತಿವಾದಿ ಮದುವೆಯಾದ ವಿಚಾರ ತಿಳಿದಿದ್ದರು ವಾದಪತ್ರದಲ್ಲಿ ಸುಳ್ಳು ವಿಚಾರಗಳನ್ನು ಕಾಣಿಸಿರುತ್ತೇನೆ ಎಂದರೆ ಸರಿಯಲ್ಲ.

**4.** ನಾನು ಸಾಧನೆ ಮಾಡುತ್ತಿರುವ ವಿಲೂನಾಮೆಯಂತೆ ದಾವಾ ಆಸ್ತಿಗಳು ಪ್ರತ್ಯೇಕವಾಗಿ ವಿಂಗಡಿಸಲ್ಪಟ್ಟಿರುವುದಿಲ್ಲಎಂದರೆ ಸರಿಯಲ್ಲ. ನಾನು ದಾವಾ ಬಿ ಅನುಸೂಚಿ ಆಸ್ತಿಯ ಸ್ವಾಧೀನದಲ್ಲಿ ಇಲ್ಲ ಎಂದರೆ ಸರಿಯಲ್ಲ. 5 ನೇ ಪ್ರತಿವಾದಿಯು ದಾವಾ ಎ ಮತ್ತು ಬಿ ಅನುಸೂಚಿ ಆಸ್ತಿಗಳ ರಕ್ಷಣೆ ಮಾಡಿಕೊಂಡು ಅಭಿವೃದ್ಧಿಪಡಿಸಿಕೊಂಡು ಬರುತ್ತಿದ್ದಾರೆ ಎಂದರೆ ಸರಿಯಲ್ಲ. 5 ನೇ ಪ್ರತಿವಾದಿಯು 1 ಮತ್ತು 2 ನೇ ಪ್ರತಿವಾದಿಯವರನ್ನು ಆರೈಕೆ ಮಾಡಿ ಒಳ್ಳೆಯ ರೀತಿಯಲ್ಲಿ ನೋಡಿಕೊಂಡು ಬರುತ್ತಿದ್ದಾರೆ ಎಂದರೆ ಸರಿಯಲ್ಲ. ನಾನು 5 ನೇ ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಆರೋಪಣೆ ಮಾಡಿ ಪ್ರಸ್ತುತ ಸುಳ್ಳು ದಾವೆಯನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ದಾವೆಯಲ್ಲಿ ಕೇಳಿದ ಯಾವುದೇ ನಿವೃತ್ತಿಯನ್ನು ಪಡೆಯಲು ಅರ್ಹಳಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ : ಇಲ್ಲ.

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಎ.ಹೆ.ಸಿ.ನ್ಯಾ ಮತ್ತು ಪ್ರ ದ ನ್ಯಾ ದಂ,
ಕಾರ್ಕಳ